INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -3, May-June, 2023,
Page No,19- 27
Peer -Reviewed, Refereed Journal

# ಶ್ರೀರಾಮಕೃಷ್ಣರ ಮಾನಸ ಪುತ್ರರಾಗಿ ಸ್ವಾಮಿ ಬ್ರಹ್ಮಾನಂದರ ಸ್ಥಾನ

ಸುಮಿತ್ರ.ಆರ್.[1]

ಕ್ರಿ.ಶ.1863 ಜನವರಿ 21ರಂದು ಕಲ್ಕತ್ತಾದ ಸಿಕ್ರಾಕುಲಿನ್ ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಆನಂದ ಮೋಹನ್ ಘೋಷ್, ತಾಯಿ ಕೈಲಾಸ ಕಾಮಿನಿ. ಬ್ರಹ್ಮಾನಂದರ ಮೂಲ ಹೆಸರು ರಾಖಾಲ ಚಂದ್ರಘೋಷ್. ಬ್ರಹ್ಮಾನಂದರು ಸ್ವಭಾವತಃ ಶಾಂತ, ಧಾರ್ಮಿಕ ಮನೋಭಾವವುಳ್ಳವರು. 1881ರ ಮಧ್ಯಭಾಗದಲ್ಲಿ ಶ್ರೀರಾಮಕೃಷ್ಣರು ಮತ್ತು ಬ್ರಹ್ಮಾನಂದರ ಮೊದಲ ಭೇಟಿಯಾಯಿತು. ತಮಗೆ ಆದ ದಿವ್ಯ ಸಾಕ್ಷಾತ್ಕಾರವನ್ನು ಲೋಕದ ಉಪಯೋಗಕ್ಕಾಗಿ ತಮ್ಮ ಶಿಷ್ಯರಿಗೆ ಧಾರೆ ಎರೆಯಲು ಕಾತುರದಿಂದ ಕಾಯುತ್ತಿದ್ದ ಶ್ರೀರಾಮಕೃಷ್ಣರಿಗೆ ಬ್ರಹ್ಮಾನಂದರ ಆಗಮನ ಅಮೃತಧಾರೆಯಾಯಿತು. ಬ್ರಹ್ಮಾನಂದರ ಗಾಂಭೀರ್ಯ ಮತ್ತು ದಕ್ಷತೆಯನ್ನು ಮನಗಂಡಿದ್ದ ರಾಮಕೃಷ್ಣರು ತನ್ನ ಮೊದಲ ಶಿಷ್ಯನ ಅಗಮನವಾಯಿತು ಎಂದು ಸಂತಸಗೊಂಡರು. ಶ್ರೀರಾಮಕೃಷ್ಣರು ರಾಖಾಲನೊಡನೆ, ತಾಯಿ ಮಗುವಿನೊಡನೆ ವರ್ತಿಸುವಂತೆ ವರ್ತಿಸುತ್ತಿದ್ದರು. ರಾಖಾಲನೂ ಹದಿನೆಂಟು ವರ್ಷದ ಹುಡುಗನಾಗಿದ್ದರು. ಅವರೊಂದಿಗೆ ಎಳೆಯ ಮಗುವಿನಂತೆ ವರ್ತಿಸುತ್ತಿದ್ದನು. ಪುರಾಣದಲ್ಲಿ ಹೇಗೆ ಬಾಲಕೃಷ್ಣನನ್ನು ನೋಡಿದ ಯಶೋಧೆಯಂತೆ ರಾಮಕೃಷ್ಣರು ವರ್ತಿಸುತ್ತಿದ್ದರು. ಎಳೆಯ ಕೂಸಿನಂತೆ ಆಡುತ್ತಿದ್ದ ಬ್ರಹ್ಮಾನಂದರು ರಾಮಕೃಷ್ಣರನ್ನು ಬಿಟ್ಟು ಎಲ್ಲೂ ಹೋಗಲು ಇಚ್ಛಿಸುತ್ತಿರಲಿಲ್ಲ. ಶಿಷ್ಯನಿಗೆ ತರಭೇತಿ ಕೊಡುವಾಗ ನಿಜವಾದ ಗುರುವಾದವನು ಎರಡು ಪಾತ್ರಗಳನ್ನು ವಹಿಸಬೇಕಾಗುತ್ತದೆ. ಪ್ರೀತಿಸುವ ತಾಯಿ ಹಾಗೂ ಶಿಕ್ಷಿಸುವ ತಂದೆ ಶ್ರೀರಾಮಕೃಷ್ಣರು ಈ ಎರಡು ಪಾತ್ರವನ್ನು ಚ್ಯುತಿಬಾರದಂತೆ ನಿಭಾಯಿಸಿದರು.

ಶ್ರೀರಾಮಕೃಷ್ಣರು ಬ್ರಹ್ಮಾನಂದರಲ್ಲಿ ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಆಧ್ಯಾತ್ಮಿಕತೆಯನ್ನು ಹೇಗೆ ಪಕ್ವಗೊಳಿಸಿದರು ಎಂಬುದಕ್ಕೆ ಕೆಲವು ನಿದರ್ಶನಗಳಿವೆ. ಒಮ್ಮೆ ಬ್ರಹ್ಮಾನಂದರು ದೇವಸ್ಥಾನದ ಪ್ರಸಾದದಿಂದ ಬೆಣ್ಣೆಯನ್ನು ತೆಗೆದು ತಿಂದುಬಿಟ್ಟಿದ್ದರು. ಅದನ್ನು ತಿಳಿದ ರಾಮಕೃಷ್ಣರು ಎಷ್ಟು ದುರಾಸೆ ಏನು? ನಿನಗೆ ಆತ್ಮಸಂಯಮ ಇಲ್ಲ ಎಂದು ಬೈದರು. ಭಯಗೊಂಡ ಬ್ರಹ್ಮಾನಂದರು ಪುನಃ ಆ ತಪ್ಪನ್ನು ಮಾಡಲಿಲ್ಲ. ಒಂದು ದಿನ ಬ್ರಹ್ಮಾನಂದರಿಗೆ ಹಸಿವಾಗುತ್ತಿತ್ತು. ಇದನ್ನು ತಿಳಿದ ರಾಮಕೃಷ್ಣರು ತಿನ್ನಲು ಕೊಡುವುದಕ್ಕೆ ಏನು ಇಲ್ಲ ಎಂದು ಪರಿತಪಿಸುತ್ತಿದ್ದರು. ತಮ್ಮ ಭಕ್ತರು ತಂದ ರಸಗುಲ್ಲಾವನ್ನು ಮೊದಲು

[1].ಸಂಶೋಧನಾ ವಿದ್ಯಾರ್ಥಿ,ತತ್ತ್ವಶಾಸ್ತ್ರ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ,ಮಾನಸ ಗಂಗೋತ್ರಿ,ಮೈಸೂರು.

ಬ್ರಹ್ಮಾನಂದರಿಗೆ ಉಣಬಡಿಸಿದರು. ಬ್ರಹ್ಮಾನಂದರು ಎಷ್ಟರಮಟ್ಟಿಗೆ ರಾಮಕೃಷ್ಣರನ್ನು ಅವಲಂಬಿಸಿದರು ಎಂದರೆ ಒಂದು ದಿನ ಒಂದು ನಾಣ್ಯ ಸಿಕ್ಕಿತು. ದಯೆಯಿಂದ ಅದನ್ನು ಭಿಕ್ಷುಕನಿಗೆ ನೀಡಿದರು. ತಮ್ಮ ದಿನಚರಿಯಲ್ಲಿ ಮಾಡಿದ ಪ್ರತಿಯೊಂದು ಕಾರ್ಯವನ್ನು ತಾಯಿಗೆ ಮಗು ವರದಿ ಮಾಡುವಂತೆ ಮಾಡುತ್ತಿದ್ದರು. ಇದನ್ನು ಕೇಳಿದ ರಾಮಕೃಷ್ಣರು 'ಮೀನು ತಿನ್ನದ ವ್ಯಕ್ತಿಗಳಿಗೆ ಮೀನಿನ ಮಾರುಕಟ್ಟೆಯಲ್ಲಿ ಏನು ಕೆಲಸ? ನಿನಗೆ ಹಣದ ವ್ಯಾಮೋಹವಿಲ್ಲ. ನೀನೇಕೆ ಆ ನಾಣ್ಯವನ್ನು ಮುಟ್ಟಿದೆ? ಎಂದು ಬೈದರು.

ಶ್ರೀರಾಮಕೃಷ್ಣರು ಶ್ರಮ ದುಡಿಮೆಯನ್ನು ನಿರೀಕ್ಷಿಸುವವರು. ತಮ್ಮ ಶಿಷ್ಯರ ಮಾತು ಮತ್ತು ಮನಸ್ಸು ಒಂದೇ ಆಗಿರಬೇಕೆಂದು ಯಾವಾಗಲೂ ಪಟ್ಟು ಹಿಡಿಯುವರು. ಒಂದು ದಿನ ಬ್ರಹ್ಮಾನಂದರು ತಮ್ಮ ಸ್ನೇಹಿತರೊಂದಿಗೆ ಮಾತನಾಡುವಾಗ ಒಂದು ಸುಳ್ಳನ್ನು ಹೇಳಿದ್ದರು. ಇದನ್ನು ಮನಗಂಡ ರಾಮಕೃಷ್ಣರು ಹೀಗೆಂದರು, ತಪ್ಪು ಎಂದರೆ ಕಳ್ಳತನ, ದರೋಡೆ, ವ್ಯಭಿಚಾರ ಇತ್ಯಾದಿ ಜೊತೆಗೆ ಸುಳ್ಳು ಕೂಡ ತಪ್ಪೆಂದರು. ಇನ್ನೆಂದು ಆ ರೀತಿ ಮಾಡಬೇಡ ಎಂದರು. "ಕಲಿಯುಗದಲ್ಲಿ ಸತ್ಯಸಂಧತೆಯೊಂದೇ ಆಧ್ಯಾತ್ಮಿಕ ಸಾಧನೆ" ಎಂದು ಎಚ್ಚರಿಸಿದರು.

ಶ್ರೀರಾಮಕೃಷ್ಣರು ತಮ್ಮ ಬೋಧನೆಗಳೆಲ್ಲವನ್ನೂ ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಿ ತೋರಿಸಿದವರು. ಇದನ್ನು ಕೆಲವು ಪ್ರಸಂಗಗಳ ಮೂಲಕ ತಿಳಿಯೋಣ! ಶ್ರೀರಾಮಕೃಷ್ಣರ ಸತ್ಯ ಪ್ರೇಮ ಎಷ್ಟು ಗಾಢವಾಗಿತ್ತು ಎಂದರೆ ಒಂದು ದಿನ ಇಂದು ಆಹಾರ ಸೇವಿಸುವುದಿಲ್ಲ ಎಂದು ಹೇಳಿಬಿಟ್ಟರೆ, ಅವರಿಗೆ ಹಸಿವಾದರೂ ಸಹ ಏನನ್ನೂ ತಿನ್ನಲು ಸಾಧ್ಯವಾಗುತ್ತಲೇ ಇರಲಿಲ್ಲ.

ರಾಮಕೃಷ್ಣರು ಎಂದೂ ಒಬ್ಬರೇ ಪ್ರಯಾಣ ಮಾಡುತ್ತಿರಲಿಲ್ಲ. ಅವರು ಸಮಾಧಿಸ್ಥರಾದರೆ, ಅವರ ದೇಹವನ್ನು ರಕ್ಷಿಸುವುದಕ್ಕಾಗಿ ಯಾರಾದರೂ ಅವರೊಡನೆ ಹೋಗುತ್ತಿದ್ದರು. ಒಮ್ಮೆ ಕಲ್ಕತ್ತಾದಲ್ಲಿ ನಡೆದ ಬ್ರಹ್ಮಸಮಾಜದ ಉತ್ಸವದಲ್ಲಿ ಭಾಗವಹಿಸಲು, ತಮ್ಮ ಜೊತೆ ರಾಮಕೃಷ್ಣರು ಬ್ರಹ್ಮಾನಂದರನ್ನು ಕರೆದುಕೊಂಡು ಹೋದರು. ಪೂಜೆ ಮತ್ತು ಉತ್ಸವ ಎಲ್ಲಾ ಮುಗಿದ ನಂತರ, ರಾಮಕೃಷ್ಣರ ಬಗ್ಗೆ ಯಾರು ಗಮನವಹಿಸಲಿಲ್ಲ. ಆಗ ಬ್ರಹ್ಮಾನಂದರು ಕೋಪದಿಂದ ಹೊರಟು ಹೋಗೋಣ ಎಂದರು. ಆಗ ರಾಮಕೃಷ್ಣರು ನಗುತ್ತ, ಗಾಡಿಯ ಬಾಡಿಗೆ ಕೊಡಲು ನಮ್ಮ ಹತ್ತಿರ ಹಣವಿಲ್ಲ. ಅಲ್ಲದೇ ಆಹಾರವೂ ಇಲ್ಲಾ ಎಂದರು. ತದನಂತರ ಕೆಲ ಹೊತ್ತಿನಲ್ಲಿ ಆಹಾರ ಬಡಿಸಿದರು. ತಡವಾಗಿ ಕಲ್ಕತ್ತಾದಿಂದ ಹೊರಟರು. ಸಾಧುವಾದವರು ಅಹಾರ ತಿನ್ನದೆ ಹೋದರೆ ಆ ಮನೆಗೆ ಅಮಂಗಳವಾದೀತು ಎಂಬುದನ್ನು ರಾಮಕೃಷ್ಣರಿಂದ ಬ್ರಹ್ಮಾನಂದರು ಕಲಿತರು.

ಕೆಲವು ಸಂದರ್ಭಗಳಲ್ಲಿ ಮೂಢ ಜನರು ಯೋಗಿಗಳ ಬಳಿ ಅಥವಾ ಸಾಧುಗಳ ಬಳಿ ಲಾಟರಿ ಬಹುಮಾನ ಬರುವಂತೆ, ಕಾಯಿಲೆ ವಾಸಿಯಾಗುವಂತೆ ಇನ್ನೂ ಮುಂತಾದ ಪ್ರಾಪಂಚಿಕ ಉದ್ದೇಶವನ್ನು ಇಟ್ಟುಕೊಂಡು ಬರುತ್ತಾರೆ. ಹಾಗೆಯೇ ಒಮ್ಮೆ ರಾಮಕೃಷ್ಣರ ಹತ್ತಿರ ಕಾಯಿಲೆ ವಾಸಿ ಮಾಡುವಂತೆ ಬೇಡಿಕೆ

ಇಡಲು ಬರುತ್ತಿದ್ದ ಜನರನ್ನು ನೋಡಿ ರಾಮಕೃಷ್ಣರು ಹೆದರಿ ಓಡಿದರು. ಇದನ್ನು ನೋಡಿದ ಬ್ರಹ್ಮಾನಂದರಿಗೆ ರಾಮಕೃಷ್ಣರು ಹೇಳಿದರು. ತಮಸಿಕ ಗುಣ ಇರುವ ವ್ಯಕ್ತಿಯನ್ನು ನಾನು ನೋಡಲು ಸಾಧ್ಯವಾಗುವುದಿಲ್ಲ. ನೀನು ಏನಾದರೂ ವ್ಯಕ್ತಿಯ ಶೀಲವನ್ನು ಕಂಡುಹಿಡಿಯಲು ಸಾಧ್ಯವೇ? ಎಂದರು. ಇಲ್ಲ ಎಂದಾಗ, ಅಂದಿನಿಂದ ವ್ಯಕ್ತಿಯನ್ನು ಯಾವ ಲಕ್ಷಣದಿಂದ ಶೀಲವನ್ನು ಊಹಿಸಬಹುದು ಎಂಬುದನ್ನು ಹೇಳಿಕೊಟ್ಟರು. ಕ್ರಮೇಣ ಬ್ರಹ್ಮಾನಂದರು ಜಪ–ಧ್ಯಾನಗಳಲ್ಲಿ ಅದೆಷ್ಟು ಮುಳುಗಿಹೋದನೆಂದರೆ, ಶ್ರೀರಾಮಕೃಷ್ಣರ ಸೇವೆಯನ್ನು ಮಾಡುವುದು ಸಹ ಸಾಧ್ಯವಾಗದೆ ಹೋಯಿತು. ತನ್ನ ಕೆಲಸವನ್ನು ಸಹ ಮಾಡಲಾಗದ ಆಧ್ಯಾತ್ಮಿಕ ಭಾವದಲ್ಲಿ ಮುಳುಗಿದರು. ಪ್ರಾಪಂಚಿಕ ಸುಖಗಳ ರುಚಿ ಹೊರಟು ಹೋಯಿತು. ಮಾನವರಾಗಿ ಹುಟ್ಟಿದ ಅವತಾರ ಪುರುಷರು ಮಾನವರಂತೆ ವರ್ತಿಸುತ್ತಾರೆ. ಬ್ರಹ್ಮಾನಂದರ ಕೃಷ್ಣನ ಒಡನಾಡಿ–ಈಶ್ವರ ಕೋಟಿ, ನಿತ್ಯ ಸಿದ್ಧ. ಆದರೆ ಅನೇಕ ಪ್ರಾಪಂಚಿಕ ಬಂಧನಗಳು ಬ್ರಹ್ಮಾನಂದರನ್ನು ಹಿಡಿಯಲು ಕಾಯುತ್ತಿದ್ದವು. ಅವರು ಬಂಧುಗಳೂ, ಸ್ನೇಹಿತರು ನೌಕರಿಯೊಂದನ್ನು ಪಡೆದು ಗೃಹಸ್ಥ ಜೀವನದಲ್ಲಿ ನೆಲೆ ನಿಲ್ಲಬೇಕೆಂದು ಅವರನ್ನು ಒತ್ತಾಯಿಸತೊಡಗಿದರು. ಆದರೆ ಬ್ರಹ್ಮಾನಂದರು ನಿರಾಕರಿಸಿದರು. ಹೆಂಡತಿ, ಮಗು ಇದ್ದರೂ ಕೂಡ ಸಾಂಸಾರಿಕ ಜೀವನಕ್ಕೆ ಅಂಟಿಕೊಂಡಿರಲಿಲ್ಲ. ಮೀನು ಕೆಸರಿನಲ್ಲಿ ಇರುವಂತೆ, ಮೀನಿನ ದೇಹದ ಮಣ್ಣು ಹೆಚ್ಚು ದಿನ ಉಳಿಯುವುದಿಲ್ಲ. ಭಕ್ತನು ಪ್ರಾಮಾಣಿಕವಾಗಿ ಭಗವಂತನನ್ನು ಪ್ರೀತಿಸಿದರೆ ಅವನಿಗೆ ಭಗವಂತನೇ ಎಲ್ಲ ಅನುಕೂಲವನ್ನು ಕಲ್ಪಿಸುವನು. ಬ್ರಹ್ಮಾನಂದರ ಅತ್ತೆ ಶ್ಯಾಮಸುಂದರಿ ಶ್ರೀರಾಮಕೃಷ್ಣರ ಭಕ್ತೆ. ಆಕೆಗೆ ಬ್ರಹ್ಮಾನಂದರ ಆಧ್ಯಾತ್ಮಿಕತೆ ಅರ್ಥವಾಗುತ್ತಿತ್ತು. ಕೆಲ ಜನರು ಆಕೆಯನ್ನು ಕೇಳಿದರು, ನಿಮ್ಮ ಅಳಿಯ ಸಂನ್ಯಾಸಿಯಾಗುವುದನ್ನು ಏಕೆ ತಡೆಯಬಾರದೆಂದು, ಅದಕ್ಕೆ ಶ್ಯಾಮಸುಂದರಿ ನಾನೇನು ಮಾಡಲಮ್ಮ ಎಲ್ಲ ಭಗವಂತನ ಇಚ್ಛೆ. ನನ್ನ ಅಳಿಯ ಸಂನ್ಯಾಸಿಯಾಗುವುದು ದೊಡ್ಡ ಪುಣ್ಯವೇ ಎಂದು ಉತ್ತರಿಸಿದಳು.

ಅವತಾರ ಪುರುಷನ ಹಾಗೂ ಅವರ ಶಿಷ್ಯರ ದಿವ್ಯಲೀಲಾ ನಾಟಕವೂ ಮಾನವನ ಬುದ್ಧಿಗೆ ನಿಲುಕದು. ಹೆಚ್ಚು ಕಾಲ ಭಗವಂತನ ಧ್ಯಾನದಲ್ಲಿ ಇದ್ದರು. ಕೆಲವೊಮ್ಮೆ ಅವರು ಮಾನವರಂತೆಯೇ ವರ್ತಿಸುವರು. ಬ್ರಹ್ಮಾನಂದರಿಗೆ ಈಗ ಎಲ್ಲಾ ಬಂಧಗಳಿಂದ ಮುಕ್ತರಾಗಿ ಸ್ವತಂತ್ರರಾಗಿದ್ದರು ರಾಮಕೃಷ್ಣರ ಕೃಪೆಯಿಂದ ಸಂಸಾರ ಮುಕ್ತರಾಗಿ ಆಧ್ಯಾತ್ಮಿಕ ಲೋಕದಲ್ಲಿ ಮುಳುಗಿದರು. ಮೊದಮೊದಲು ರಾಮಕೃಷ್ಣರ ಕಿರಿಯ ಶಿಷ್ಯರನ್ನು ಕಂಡರೆ ಅಸೂಯೆಪಡುತ್ತಿದ್ದ ಬ್ರಹ್ಮಾನಂದರಿಗೆ ಗುರುಕೃಪೆಯಿಂದ ಆ ಮತ್ಸರವೂ ಇನ್ನಿಲ್ಲದಂತೆ ಹೊರಟು ಹೋಯಿತು.

ಶ್ರೀರಾಮಕೃಷ್ಣರದು ಅದೆಂತಹ ವಿಚಿತ್ರ ಶಕ್ತಿ ಎಂದರೆ, ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿ ಅವರ ಭಕ್ತರಿಗೆ ಇರಲಿಲ್ಲ. ಒಮ್ಮೆ ಬ್ರಹ್ಮಾನಂದರು ನನಗೆ ಕಾಮವನ್ನು ಪೂರ್ತಿಯಾಗಿ ಕಳೆದುಕೊಳ್ಳಲು ಆಗುತ್ತಿಲ್ಲ. ಏನು ಮಾಡಲಿ? ಎಂದು ಕೇಳಿದರು. ಅದಕ್ಕೆ ರಾಮಕೃಷ್ಣರು ಏನನ್ನೋ ಹೇಳುತ್ತ ಎದೆಯ ಭಾಗವನ್ನು

ಮುಟ್ಟಿದರು. ಆ ಕ್ಷಣದಿಂದ ಕಾಮವೆಲ್ಲಾ ಸಂಪೂರ್ಣವಾಗಿ ಹೋಯಿತು. ಅಲ್ಲಿಂದ ಮುಂದೆ ಅದರ ಇರುವಿಕೆಯನ್ನು ನಾನೆಂದೂ ಅನುಭವಿಸಿಯೇ ಇಲ್ಲ ಎಂದು ಬ್ರಹ್ಮಾನಂದರು ಸ್ಮರಿಸಿದರು.

1885ರ ಮಧ್ಯಭಾಗದಲ್ಲಿ ಶ್ರೀರಾಮಕೃಷ್ಣರಿಗೆ ಗಂಟಲು ಕ್ಯಾನ್ಸರ್ ತಗುಲಿತು. ಬ್ರಹ್ಮಾನಂದರು ಅವರ ಹಾರೈಕೆಗಾಗಿ ದಕ್ಷಿಣೇಶ್ವರದಲ್ಲಿಯೇ ಇರಲು ಆರಂಭಿಸಿದರು. ಈ ಸಂದರ್ಭದಲ್ಲಿ ಮಹಿಮಚರಣು ತಂತ್ರಗಳಲ್ಲಿ ಹೇಳಿರುವ ಬ್ರಹ್ಮಚಕ್ರವೊಂದನ್ನು ಅವರ ಸಮ್ಮುಖದಲ್ಲಿ ಮಾಡಬಯಸಿದ್ದನು. ಇದನ್ನು ನೋಡುತ್ತಿದ್ದ ಬ್ರಹ್ಮಾನಂದರು ಭಾವಾವಿಷ್ಟನಾದನು. ಶ್ರೀರಾಮಕೃಷ್ಣರು ಮಂಚದಿಂದ ಇಳಿದು ಬಂದು, ಜಗನ್ಮಾತೆಯ ನಾಮಸ್ಮರಣೆ ಮಾಡುತ್ತ ಬ್ರಹ್ಮಾನಂದರ ಎದೆಯ ಮೇಲೆ ಕೈಯನ್ನಿಟ್ಟರು. ಆಗ ಬ್ರಹ್ಮಪ್ರಜ್ಞೆ ಬಂದಿತು.

ಒಮ್ಮೆ ಕಾಶಿಪುರ ತೋಟದ ಮನೆಯಲ್ಲಿ ಶ್ರೀರಾಮಕೃಷ್ಣರು ಬ್ರಹ್ಮಾನಂದರನ್ನು ಕುರಿತು ರಾಜನಿಗೆ ಇರಬೇಕಾದ ಚುರುಕು ಬುದ್ಧಿ ಇದೆ. ಅವನು ಬಯಸಿದರೆ ಒಂದು ರಾಜ್ಯವನ್ನೇ ಆಳಬಲ್ಲ ಎಂದರು. ಭವಿಷ್ಯದಲ್ಲಿ ಶಿಷ್ಯರಿಗೆಲ್ಲ ಬ್ರಹ್ಮಾನಂದರು ಮುಂದಾಳಾಗಬೇಕೆಂದು ರಾಮಕೃಷ್ಣರು ಬಯಸುತ್ತಿದ್ದಾರೆ ಎಂದು ಆರ್ಥಮಾಡಿಕೊಂಡ ನರೇಂದ್ರ ಉಳಿದವರಿಗೆ ನಾವು ಇನ್ನೂ ಬ್ರಹ್ಮಾನಂದರನ್ನು 'ಮಹಾರಾಜ್' ಎಂದು ಕರೆಯೋಣ ಎಂದರು. ಶ್ರೀರಾಮಕೃಷ್ಣರಿಗೆ ಇದನ್ನು ಕೇಳಿ ಬಹಳ ಸಂತೋಷವಾಯಿತು. ನಂತರ ಶ್ರೀರಾಮಕೃಷ್ಣ ಮಹಾಸಂಘದಲ್ಲಿ ಮೊದಲ ಅಧ್ಯಕ್ಷರಾದರು. ಪ್ರೇಮವನ್ನು ಹೊರತುಪಡಿಸಿ ಇನ್ನಾವ ನಿಯಮವನ್ನು ಜಾರಿಗೆ ತರಲಿಲ್ಲ.

ಬ್ರಹ್ಮಾನಂದರು ಸಾಕಾರ ದೇವರಲ್ಲಿ ನಂಬಿಕೆಯುಳ್ಳವರು. ನಿರಾಕಾರದ ವಿಚಾರ ಮಾತನಾಡಿದರೆ ಅವರು ಅಲ್ಲಿಂದೆದ್ದು ಹೋಗಿಬಿಡುತ್ತಿದ್ದರು. ಬ್ರಹ್ಮಾನಂದರು ಸಾಕಾರ ದೇವರಲ್ಲಿ ನಂಬಿಕೆವುಳ್ಳವರಾಗಿದ್ದರಿಂದ ಶ್ರೀರಾಮಕೃಷ್ಣರು ಕಾಳಿ ಮತ್ತು ಕೃಷ್ಣ ದೇವಾಲಯಗಳಿಗೆ ಹೋದಾಗ ದೇವರ ವಿಗ್ರಹಗಳಿಗೆ ನಮಸ್ಕಾರ ಮಾಡುತ್ತಿದ್ದರು. ಇದು ಬ್ರಹ್ಮಸಮಾಜದ ಪ್ರತಿಜ್ಞೆಗೆ ವಿರೋಧವಾಗಿತ್ತು. ಒಂದು ದಿನ ಇದನ್ನು ಗಮನಿಸಿದ ವಿವೇಕಾನಂದರು ಬ್ರಹ್ಮಾನಂದರ ವಿರುದ್ಧ ಕಿಡಿಕಾಯ್ದರು. ಇದನ್ನು ಗಮನಿಸಿದ ರಾಮಕೃಷ್ಣರು ಸೂಕ್ಷ್ಮಸ್ವಭಾವದ ಬ್ರಹ್ಮಾನಂದರಿಗೆ ಗದರಿಸಬೇಡ. ಪ್ರಾರಂಭದಲ್ಲಿ ಯಾರು ನಿರಾಕಾರ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಲಾರರು ಎಂದು ಬುದ್ಧಿ ಹೇಳಿದರು. ತದನಂತರ ವಿವೇಕಾನಂದರು ಅವರ ದಾರಿಗೆ ಅಡ್ಡಿಪಡಿಸಲಿಲ್ಲ.

ಒಮ್ಮೆ ಶ್ರೀರಾಮಕೃಷ್ಣರು ಬ್ರಹ್ಮಾನಂದರಿಗೆ ತನ್ನ ಕಾಲನ್ನು ಸ್ವಲ್ಪ ಒತ್ತುವಂತೆ ಹೇಳಿದರು. ಆಗ ಬ್ರಹ್ಮಾನಂದರು ಸ್ವಲ್ಪ ಹಿಂದೆ ಮುಂದೆ ನೋಡಿದರು. 'ಸಾಧು ಸೇವೆ ಮಾಡುವುದರಿಂದ ಒಳ್ಳೆಯ ಫಲ ದೊರೆಯುವುದು ಎಂದು ಹೇಳಿದರು. ಬ್ರಹ್ಮಾನಂದರು ಕಾಲು ಒತ್ತಲಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿ ಅವನಿಗೆ ಏಳೆಂಟು ವರ್ಷದ ಹುಡುಗಿಯ ರೂಪದಲ್ಲಿ ಶ್ರೀರಾಮಕೃಷ್ಣರ ಹಾಸಿಗೆ ಸುತ್ತ ತಿರುಗುತ್ತಿದ್ದು

ನಂತರ ಅವರ ಶರೀರವನ್ನು ಪ್ರವೇಶಿಸಿದ ದರ್ಶನವಾಯಿತು. ಈ ದೃಶ್ಯ ಬ್ರಹ್ಮಾನಂದರನ್ನು ಚಕಿತಗೊಳಿಸಿತು. ಶ್ರೀರಾಮಕೃಷ್ಣರು ಅನಂತರ ನಗುತ್ತ 'ಸಾಧು ಸೇವೆ ಮಾಡುವುದರ ಪರಿಣಾಮ ನೋಡಿದಿಯಾ' ಎಂದರು.

ಮತ್ತೊಮ್ಮೆ ಶ್ರೀರಾಮಕೃಷ್ಣರು ಕಾಳಿ ದೇವಾಲಯಕ್ಕೆ ಹೋಗುವುದನ್ನು ಗಮನಿಸಿದ. ಬ್ರಹ್ಮಾನಂದರು ಅವರನ್ನು ಹಿಂಬಾಲಿಸಿದರು. ರಾಮಕೃಷ್ಣರು ದೇವಾಲಯ ಗರ್ಭಗುಡಿ ಪ್ರವೇಶಿಸಿದರು. ಬ್ರಹ್ಮಾನಂದರು ಗರ್ಭಗುಡಿಯ ಪ್ರಾಂಗಣದಲ್ಲಿ ಧ್ಯಾನಕ್ಕೆ ಕುಳಿತರು. ಸ್ವಲ್ಪ ಹೊತ್ತಿನ ನಂತರ ಅವರಿಗೆ ಕೋಟಿಸೂರ್ಯ ಸಮನಾದ ಪ್ರಖರ ಪ್ರಭೆಯೊಂದು ಜಗನ್ಮಾತೆಯ ಕಡೆಯಿಂದ ಹೊರಟು ತನ್ನ ಕಡೆಗೆ ಬರುತ್ತಿರುವಂತೆ ಭಾಸವಾಯಿತು. ಅವನು ಹೆದರಿಕೊಂಡು ಶ್ರೀರಾಮಕೃಷ್ಣರ ಹತ್ತಿರ ಓಡಿ ಹೋದರು.

ಒಂದು ದಿನ ಬ್ರಹ್ಮಾನಂದರು ದೇವಾಲಯದಲ್ಲಿ ಧ್ಯಾನ ಮಾಡುತ್ತಿದ್ದಾಗ ಭಾವಾವಿಷ್ಟರಾಗಿದ್ದ ಶ್ರೀರಾಮಕೃಷ್ಣರು ಅಲ್ಲಿಗೆ ಬಂದರು. ಬ್ರಹ್ಮಾನಂದರನ್ನು ಕುರಿತು, 'ನೋಡು, ಇದು ನಿನ್ನ ಮಂತ್ರ' ಮತ್ತು "ಅಲ್ಲಿರುವುದು ನಿನ್ನ ಇಷ್ಟ ದೇವತೆ ಎಂದು ಹೇಳಿದರು. ತಕ್ಷಣ ಬ್ರಹ್ಮಾನಂದರಿಗೆ ದೇವರ ಜ್ಯೋತಿರ್ಮಯ ರೂಪವು ಗೋಚರಿಸಿ ಅವರು ಭಾವಪರವಶರಾದರು. ತನ್ನ ಗುರುವು ಯಾರಿಗೆ ಬೇಕಾದರೂ ಭಗವಂತನ ದರ್ಶನ ಮಾಡಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಮನವರಿಕೆಯಾಯಿತು. ಶ್ರೀರಾಮಕೃಷ್ಣರ ಮಾರ್ಗದರ್ಶನದಲ್ಲಿ ಬ್ರಹ್ಮಾನಂದರು ತೀವ್ರವಾದ ಆಧ್ಯಾತ್ಮಿಕ ಸಾಧನೆಯನ್ನು ಮಾಡತೊಡಗಿದರು. ರಾತ್ರಿ–ಹಗಲು, ಆಹಾರ ಪಾನೀಯ, ಬಂಧು–ಬಾಂಧವರು ಯಾವುದಕ್ಕೂ ಗಮನ ಕೊಡಲಿಲ್ಲ. "ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಪುತ್ರನಿಗೆ ಆಸನಗಳು, ಮುದ್ರೆಗಳು, ಜಪ, ಧ್ಯಾನಯೋಗ ಇತ್ಯಾದಿ ತಪಶ್ಚರ್ಯೆಗಳು ಮುಂತಾದ ಅನೇಕ ಆಧ್ಯಾತ್ಮಿಕ ಸಾಧನೆಗಳನ್ನು ಹೇಳಿಕೊಟ್ಟರು".

ಒಂದು ದಿನ ಅವರು ಬ್ರಹ್ಮಾನಂದರಿಗೆ ಜಗನ್ಮಾತೆಯ ಮುಂದೆ ಶಕ್ತಿಪಥದ ದೀಕ್ಷೆಯನ್ನು ಕೊಟ್ಟು ಅವನಿಗೆ ಕುಂಡಲಿಯ ವಿವಿಧ ಕೇಂದ್ರಗಳಲ್ಲಿ ಧ್ಯಾನ ಮಾಡುವುದನ್ನು ಕಲಿಸಿದರು. ಈ ಸಾಧನೆಗಳನ್ನು ಬ್ರಹ್ಮಾನಂದರು ಗುಟ್ಟಾಗಿ ಮಾಡತೊಡಗಿದರು. ಒಂದು ದಿನ ಮಧ್ಯಾಹ್ನ ನಾನು ಪಂಚವಟಿಯಲ್ಲಿ ಧ್ಯಾನ ಮಾಡುತ್ತಿದ್ದಾಗ ಶ್ರೀರಾಮಕೃಷ್ಣರು 'ಬ್ರಹ್ಮ ಶಬ್ದರೂಪದ ಅವಿರ್ಭಾವವನ್ನು ಕುರಿತು ಮಾತನಾಡುತ್ತಿದ್ದರು. ಅದನ್ನು ಕೇಳಿ ಪಂಚವಟಿಯ ಪಕ್ಷಿಗಳು ಕೂಡ ವೇದಸೂಕ್ತವನ್ನು ಹಾಡುತ್ತಿದ್ದವು ಎಂದು ಆ ದಿನದ ಅನುಭವವನ್ನು ಬ್ರಹ್ಮಾನಂದರು ಸ್ಮರಿಸಿಕೊಂಡರು.

ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿ ಬ್ರಹ್ಮಾನಂದರ ಪಾತ್ರವನ್ನು ಗಮನಿಸುವುದಾದರೆ ವಿವೇಕಾನಂದರ ಸಮಾಧಿ ನಂತರ ಬ್ರಹ್ಮಾನಂದರ ಮಹಾಸಂಘದ ಅಧ್ಯಕ್ಷರಾದರು. ಅಪಾರ ಅನುಭವ, ವಾಸ್ತವಿಕ ಪ್ರಜ್ಞೆ, ನಿಸ್ವಾರ್ಥ ಪ್ರೇಮ, ಅಪರಿಮಿತ ಅನುಕಂಪ, ಉನ್ನತ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಹೊಂದಿದ್ದ ಬ್ರಹ್ಮಾನಂದರು ರಾಮಕೃಷ್ಣ ಮಿಷನ್ನಿನ ಕಡಿವಾಣ ಹಿಡಿಯಲು ಮುಂದೆ ಬಂದರು. ಒಬ್ಬನನ್ನು

ನೋಡಿದೊಡನೆ ಆತನ ಶೀಲ ಸ್ವಭಾವಗಳನ್ನು ಅರಿಯುತ್ತಿದ್ದ ಅವರು ಅಂತೆಯೇ ಸಂನ್ಯಾಸಿಗಳಿಗೆ ಸೂಕ್ತ ಮಾರ್ಗದರ್ಶಕರಾದರು. ಶಿಷ್ಯರನ್ನು ಕುರಿತು ಬ್ರಹ್ಮಾನಂದರು "ನಿಮ್ಮ ಇಡೀ ಮನಸ್ಸನ್ನು ಭಗವಂತನಿಗೆ ಕೊಟ್ಟು ಬಿಡಿ. ಮಾನಸಿಕ ಶಕ್ತಿ ಪೂರ್ತಿ ಇಲ್ಲದಿದ್ದರೆ ನಿಮ್ಮ ಮನಸ್ಸಿನ ಒಂದು ಅಲ್ಪ ಭಾಗದಿಂದಲೇ ಲೋಕವು ಬೆರಗಾಗುವಷ್ಟು ಕೆಲಸಗಳನ್ನು ನೀವು ಮಾಡಬಲ್ಲಿರಿ.

ಸಂಸ್ಥೆಯ ಮುಖ್ಯಸ್ಥರಾಗಿ, ಬ್ರಹ್ಮಾನಂದರು ಧೈರ್ಯದಿಂದಲೂ, ಶಾಂತಮನಸ್ಸಿನಿಂದಲೂ ಒಂದಾದ ಮೇಲೊಂದರಂತೆ ಸಮಸ್ಯೆಯನ್ನು ಎದುರಿಸುತ್ತಾ ಹೋದರು. 1902 ಜುಲೈ 14ರಂದು ತುರೀಯಾನಂದರು ಅಮೆರಿಕಾದಿಂದ ಬೇಲೂರು ಮಠಕ್ಕೆ ಹಿಂದಿರುಗಿದರು. ಶಾರದಾನಂದರು ಮತ್ತು ಬ್ರಹ್ಮಾನಂದರು ಅವರನ್ನು ಆದರದಿಂದ ಬರಮಾಡಿಕೊಂಡರು. ತ್ರಿಗುಣಾತೀತಾನಂದರು ಸ್ವಾಮೀಜಿ ಪ್ರಾರಂಭಿಸಿದ ಉದ್ಬೋಧನ್ ಪತ್ರಿಕೆಯನ್ನು ಸಂಪಾದಿಸಿ ಮುನ್ನಡೆಸಿದರು. ಪತ್ರಿಕೆ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿತ್ತು. ಬ್ರಹ್ಮಾನಂದರು ಶಾರದಾನಂದರನ್ನು ಅದರ ಸಂಪಾದಕರನ್ನಾಗಿ ಮಾಡಿ ಅದಕ್ಕಾಗಿ ಹಣವನ್ನು ಭಕ್ತರಿಂದ ಲೇಖನಗಳನ್ನು ಸಂಗ್ರಹಿಸಿ ತಾವು ಬಂಗಾಳಿಯಲ್ಲಿ 'ಗುರು' ಎಂಬ ಶ್ರೀರಾಮಕೃಷ್ಣರ ಬೋಧನೆಗಳ ಒಂದು ಲೇಖನಮಾಲೆಯನ್ನು ಬರೆಯತೊಡಗಿದರು. ಪತ್ರಿಕೆಯನ್ನು ಉಳಿಸಲು ಮುಂದಾದರು.

ಸಂಸ್ಥೆಯ ಸಂನ್ಯಾಸಿಗಳ ಸ್ವಾತಂತ್ರ್ಯವನ್ನು ಮಿತಗೊಳಿಸುವ ನಿಯಮವನ್ನು ರೂಪಿಸುವ ಬದಲಿಗೆ ಬ್ರಹ್ಮಾನಂದರು ಅವರ ಶೀಲ ಸ್ವಭಾವವನ್ನು ರೂಪಿಸುವಲ್ಲಿ ಹೆಚ್ಚು ಆಸಕ್ತರಾದರು. ಧರ್ಮದ ಸಾಫಲ್ಯ ಸ್ವಾತಂತ್ರ್ಯ ಹಾಗೂ ಪ್ರೀತಿಯಲ್ಲಿ ಅಡಗಿದೆ ಎಂಬುದನ್ನು ಅವರು ಅನುಭವದಿಂದ ತಿಳಿಸಿದರು. ಆದರೆ ಯಾವ ಸಂಸ್ಥೆಯೂ ಕೆಲವು ಮಾರ್ಗದರ್ಶಿ ಸೂತ್ರಗಳಿಲ್ಲದೆ ಸರಿಯಾಗಿ ನಡೆಯಲಾರದಲ್ಲವೆ? ಆಲುಬಜಾರಿನ ರಾಮಕೃಷ್ಣ ಮಠಕ್ಕಾಗಿ ಸೂತ್ರಗಳನ್ನು ರೂಪಿಸುವಾಗ ವಿವೇಕಾನಂದರು ಈ ಮಾತುಗಳನ್ನು ಹೇಳಿದರು. 'ನೋಡು, ನಾವು ನಿಯಮವನ್ನು ರೂಪಿಸುವೆವು. ಇದರಲ್ಲಿ ಸಂದೇಹವಿಲ್ಲ. ಆದರೆ ಮುಖ್ಯೋದ್ದೇಶವನ್ನು ನಾವು ಮರೆಯಬಾರದು. ನಮ್ಮ ಉದ್ದೇಶ ಈ ನಿಯಮವನ್ನು ದಾಟಿ ಮುಂದೆ ಹೋಗುವುದು. ಸಹಜವಾಗಿ ನಮ್ಮಲ್ಲಿ ಕೆಲವು ಕೆಟ್ಟ ಅಂಶಗಳಿರುತ್ತವೆ. ಅದನ್ನು ನಾವು ಈ ನಿಯಮವನ್ನು ಪಾಲಿಸುವುದರ ಮೂಲಕ ಬದಲಿಸಿಕೊಳ್ಳಬೇಕು. ಒಂದು ಮುಳ್ಳಿನಿಂದ ಇನ್ನೊಂದು ಮುಳ್ಳನ್ನು ತೆಗೆದು ಎರಡನ್ನು ಎಸೆದುಬಿಡುವಂತೆ ಕೊನೆಗೆ ಇವುಗಳನ್ನು ಮೀರಿ ಮುನ್ನಡೆಯಬೇಕು.

ಬೇಲೂರು ಮಠದಲ್ಲಿ ಒಂದು ದಿನ ಬೆಳಿಗ್ಗೆ ರಾಮಕೃಷ್ಣ ಮಹಾಸಂಘದ ಈ ನಿಯಮಾವಳಿಯನ್ನು ಸ್ವಾಮಿ ಬ್ರಹ್ಮಾನಂದರ ಕೊಠಡಿಯಲ್ಲಿ ಓದಲಾಯಿತು. ಸ್ವಾಮಿಗಳು ತಮ್ಮ ಸಣ್ಣ ಮಂಚದ ಮೇಲೆ ಗಾಢವಾದ ಧ್ಯಾನದಲ್ಲಿ ಕುಳಿತಿದ್ದರು. ಓದಿದವರು ಸ್ವಾಮಿ ಶುದ್ಧಾನಂದರು. ಓದಿದ ನಂತರ ಬ್ರಹ್ಮಾನಂದರು ಸ್ವಾಮೀಜಿ ಈ ನಿಯಮಗಳನ್ನು ಭೌತಿಕ ಸ್ತರದಿಂದ ರಚಿಸಲಿಲ್ಲ. ಮನಸ್ಸಿನ ಉನ್ನತ ಸ್ತರದಲ್ಲಿದ್ದುಕೊಂಡು

ಹೇಳಿರುವರು. ಮಾನವರು ರೂಪಿಸಿರುವ ಸ್ತ್ರೀಯಾಗಲೀ, ಪುರುಷನಾಗಲೀ, ಬಡವ–ಬಲ್ಲಿದನಾಗಲಿ, ಪ್ರತಿಯೊಬ್ಬರು ರಾಮಕೃಷ್ಣರ ಸೇವೆಯಲ್ಲಿ ಹಾಗೂ ಆಧ್ಯಾತ್ಮಿಕ ಪರಂಪರೆಯಲ್ಲಿ ಸಮಾನ ಹಕ್ಕಿದೆ. ಸ್ವಾಮೀಜಿಯ ಈ ನಿಯಮವನನು ಪೂರ್ಣಶ್ರದ್ಧೆಯಿಂದ ಸ್ವೀಕರಿಸಿ ನಿಮ್ಮ ಬಾಳಿನಲ್ಲಿ ಅನುಷ್ಠಾನ ಮಾಡಿ. ಇದರ ಪರಿಣಾಮ ಕೆಟ್ಟ ಪ್ರಭಾವ ಕಡಿಮೆಯಾಗಿ ಸತ್ಯಯುಗವು ಪ್ರತ್ಯಕ್ಷವಾಗುವುದನ್ನು ನೋಡುವಿರಿ ಎಂದರು.

ಇನ್ನೊಂದು ಸಂದರ್ಭದಲ್ಲಿ, ಸ್ವಾಮಿ ಧೀರಾನಂದರು ಕಿರಿಯ ಸಂನ್ಯಾಸಿಗಳ ಪ್ರಯೋಜನಕ್ಕಾಗಿ ಕೆಲವು ನಿಯಮಗಳನ್ನು ಮಾಡಬೇಕೆಂದು ಸ್ವಾಮಿ ಬ್ರಹ್ಮಾನಂದರನ್ನು ಕೇಳಿದಾಗ, ಅವರು 'ಸ್ವಾಮೀಜಿ ಈಗಾಗಲೇ ನಮಗಾಗಿ ನಿಯಮವನ್ನು ರಚಿಸಿದ್ದಾರೆ. ನಾವೇನೂ ಹೊಸದಾಗಿ ಅದಕ್ಕೆ ಸೇರಿಸಬೇಕಾಗಿಲ್ಲ. ಪ್ರೇಮವನ್ನು ಹೆಚ್ಚು ಸೇರಿಸಿ, ಭಕ್ತಿಯನ್ನು ಹೆಚ್ಚು ಬೆಳೆಸಿಕೊಳ್ಳಿ. ಭಗವದಾದರ್ಶದ ಕಡೆಗೆ ಹೋಗಲು ಇತರರಿಗೆ ಸಹಾಯ ಮಾಡಿ ಎಂದರು. ಬ್ರಹ್ಮಾನಂದರನ್ನು ಕುರಿತು ಸ್ವಾಮಿ ಅಭೇದಾನಂದರು ಹೀಗೆಂದರು. ಪ್ರೇಮವೇ ಅವರ ಶೀಲ ಸ್ವಭಾವದ ಪ್ರಧಾನ ಅಂಶವಾಗಿತ್ತು. "ರಾಮಕೃಷ್ಣ ಮಹಾಸಂಘದ ಮೊದಲ ಮಹಾಧ್ಯಕ್ಷರಾಗಿ ಅವರು "ಪ್ರೇಮವನ್ನು" ಹೊರತು ಇನ್ಯಾವ ನಿಯಮವನ್ನು ಜಾರಿಗೆ ತರಲಿಲ್ಲ. ಪ್ರೇಮದ ಆ ಬಲದ ಮೂಲಕವೇ ಅವರು ಪ್ರತಿಯೊಬ್ಬರ ಮೇಲು ಹಿಡಿತವನ್ನು ಸಾಧಿಸಿದ್ದರು.

ಬ್ರಹ್ಮಾನಂದರು ಹೆಚ್ಚಾಗಿ ಮಠದಿಂದ ಸಾಮಾನ್ಯವಾಗಿ ಹೊರಗಡೆ ಇರುತ್ತಿದ್ದರು. ಅವರು ಸಂಘದ ವಿಶ್ವಾಸ ಮಂಡಳಿಯ ಸಭೆಗಳಿಗೆ ಬರುತ್ತಿದ್ದದು ತೀರ ಅಪರೂಪವಾಗಿತ್ತು. ಕಾರ್ಯದರ್ಶಿಗಳಾಗಿದ್ದ ಶಾರದಾನಂದರೇ ಬ್ರಹ್ಮಾನಂದರೊಡನೆ ಚರ್ಚಿಸಿ ಒಪ್ಪಿಗೆ ಪಡೆದು ಅನುದಿನದ ಆಡಳಿತ ನಿರ್ವಹಿಸುತ್ತಿದ್ದರು. ಬೇಲೂರು ಮಠದಲ್ಲೇ ಇದ್ದಾಗಲೂ ಈ ಸಭೆಗಳಿಗೆ ಬರಲು ಬ್ರಹ್ಮಾನಂದರು ಹಿಂಜರಿಯುತ್ತಿದ್ದರು. ಒಂದು ದಿನ ಒಬ್ಬ ಶಿಷ್ಯನು 'ಮಹಾರಾಜ್' ನೀವು ಸಭೆಗಳಿಗೆ ಬರುವ ಬಗ್ಗೆ ಅಷ್ಟೇಕೆ ಕಷ್ಟಪಡುತ್ತೀರಿ' ಎಂದು ಪ್ರಶ್ನಿಸಿದರು. ಅದಕ್ಕೆ ಬ್ರಹ್ಮಾನಂದರು 'ನೋಡಪ್ಪ, ಇಡೀ ಪ್ರಪಂಚವೇ ನನಗೆ ಒಂದು ನೆರಳಿನಂತೆ ಕಾಣುತ್ತದೆ. ಸಭೆಗೆ ಬಂದು ಎಲ್ಲ ವಿವರಗಳಿಗೆ ಗಮನಕೊಡುವುದು ಕಷ್ಟ ಎಂದರು. ಒಂದು ಸಲ ಶಾರದಾನಂದರು ಕಿರಿಯ ಸಂನ್ಯಾಸಿಯೊಬ್ಬರಿಗೆ 'ನಾನು ಏನಾದರೂ ಹೇಳಿದರೆ ನೀನು ಅದು ಸರಿಯೋ ತಪ್ಪೋ ಎಂದು ವಿವೇಚಿಸಿ ನಿರ್ಣಯಿಸಿಕೋ, ಆದರೆ ಮಹಾರಾಜ್ ಏನಾದರೂ ಹೇಳಿದರೆ ಅದನ್ನು ನೀನು ಎಳ್ಳಷ್ಟೂ ಅನುಮಾನಿಸದೆ ಅದು ಸತ್ಯವೆಂದು ಸ್ವೀಕರಿಸು ಎಂದು ಹೇಳಿದರು. ಅಧ್ಯಕ್ಷರಾಗಿದ್ದಾಗ, ಬ್ರಹ್ಮಾನಂದರು ಮಹಾಸಂಘದ ಕಾರ್ಯಗಳ ಸಂಘಟನೆಗಾಗಿ ಭಾರತದ ಎಲ್ಲ ಕಡೆಗಳಲ್ಲಿ ಪ್ರವಾಸ ಮಾಡುತ್ತಿದ್ದರು. ಉತ್ತರ ಭಾರತದಲ್ಲಿ ಸಂಚರಿಸಿ ಆಧ್ಯಾತ್ಮಿಕ ಸಾಧನೆ ಮಾಡಿದರು. ವಾರಣಾಸಿಯ ಅದ್ವೈತ ಆಶ್ರಮಕ್ಕೆ ಆರ್ಥಿಕ ನೆರವು ನೀಡಿದರು. ದಕ್ಷಿಣ ಭಾರತ, ಪೂರ್ವ ಬಂಗಾಳ, ಪುರಿ ಹಾಗೂ ಭುವನೇಶ್ವರ, ಬೇಲೂರು ಮಠ ಮತ್ತು ಕೊಲ್ಕತ್ತಾದಲ್ಲಿ ವೇದಾಂತ ಉಪನ್ಯಾಸ ನೀಡಿದರು. 'A guide to

spiritual life' ಈ ಪುಸ್ತಕವು ಅನುಷ್ಠಾನ ವೇದಾಂತ ಸಾಹಿತ್ಯದ ಒಂದು ಉತ್ಕೃಷ್ಟ ಕೃತಿಯಾಗಿದೆ. ಬ್ರಹ್ಮಾನಂದರಿಗೆ ಶ್ರೀಮಾತೆಯ ಮೇಲೆ ಅಪಾರವಾದ ಭಕ್ತಿ. ಪ್ರತಿನಿತ್ಯ ಬೆಳಿಗ್ಗೆ ಹೋಗಿ ಅವರಿಗೆ ನಮಸ್ಕರಿಸಿ ಬರುವರು. ಬಾವೋದ್ವೇಗಕ್ಕೆ ಎಲ್ಲಿ ಒಳಗಾಗುವನೋ ಎಂಬ ಭಯದಿಂದ, ಅವರಿದ್ದ ಮಹಡಿಯ ಮೇಲಕ್ಕೆ ಹತ್ತಿ ಹೋಗದೆ, ಕೆಳಗಿನ ಪ್ರಾಂಗಣದಿಂದಲೇ ತಾಯಿಗೆ ನಮಸ್ಕರಿಸಿದರು. ಒಂದು ದಿನ ಗೋಲಪ್–ಯಾ ಬ್ರಹ್ಮಾನಂದರಿಗೆ ಕೇಳಿದರು. ಪೂಜೆಯ ಪ್ರಾರಂಭದಲ್ಲಿ ಭಕ್ತನು ಜಗನ್ಮಾತೆಯಾದ ಶಕ್ತಿಯನ್ನು ಮೊದಲು ಒಲಿಸಿಕೊಳ್ಳುವುದು ಏಕೆ ಎಂದು ಶ್ರೀಮಾತೆ ಕೇಳುತ್ತಿದ್ದಾರೆ ಎಂದು ಹೇಳಿದರು. ಏಕೆಂದರೆ ಬ್ರಹ್ಮಜ್ಞಾನದ ಬೀಗದ ಕೈ ಜಗನ್ಮಾತೆಯ ಬಳಿಯೇ ಇರುವುದು, ಅದಕ್ಕಾಗಿ ತಾಯಿ ಕೃಪೆಯಿಟ್ಟು ಬಾಗಿಲನ್ನು ತೆರೆಯದೆ ಇದ್ದರೆ ಬ್ರಹ್ಮನೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳುವ ಬೇರೆ ಮಾರ್ಗವಿಲ್ಲ ಎಂದರು.

ಬ್ರಹ್ಮಾನಂದರು ಶ್ರೀರಾಮಕೃಷ್ಣರ ಕೆಲವು ಬೋಧನೆಗಳನ್ನು ಬಂಗಾಳಿಯಲ್ಲಿ ಸಂಗ್ರಹಿಸಿ ಇಟ್ಟುಕೊಂಡಿದ್ದರು. ಅವು ಮೊದಲು 'ಉದ್ಬೋಧನ್' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದವು. ನಂತರ ಇಂಗ್ಲೀಷಿಗೆ ಭಾಷಾಂತರ ಮಾಡಲಾಯಿತು. ವಾರಣಾಸಿಗೆ ಭೇಟಿಕೊಟ್ಟ ಸಮಯದಲ್ಲಿ ಅವರು ಈ ಪುಸ್ತಕವನ್ನು ಮುಗಿಸಿದರು. ಈ ಬೋಧನೆಯನ್ನು ಕೈಬರಹದಲ್ಲಿ ಬರೆಯುವಾಗ ಅವರು ಯಾರನ್ನು ತಮ್ಮ ಕೊಠಡಿಯೊಳಗೆ ಇರಲು ಬಿಡುತ್ತಿರಲಿಲ್ಲ. ಕೆಲವೊಮ್ಮೆ ಮಹಾರಾಜ್ ಮಧ್ಯರಾತ್ರಿಯಲ್ಲಿ ಎದ್ದು ಕುಳಿತು ಸೇವಕರನ್ನು ಅದರ ಹಸ್ತಪ್ರತಿ ತರುವಂತೆ ಹೇಳುವರು. ರಾಮಕೃಷ್ಣ ಹೀಗೆ ಹೇಳದೆ ಹಾಗೆ ಹೇಳಿರುವರು ಎಂದು ಸರಿಪಡಿಸುತ್ತಿದ್ದರು.

ಬ್ರಹ್ಮಾನಂದರು ಸಂನ್ಯಾಸಿಗಳಿಗೆ ಕಲಸ ಮಾಡುವ ರಹಸ್ಯವನ್ನು ಕಲಿಸುತ್ತಿದ್ದರು. ವಹಿಸಿದ ಕೆಲಸವನ್ನು ಕೇವಲ ಮಾಡಿಮುಗಿಸಿದರೆ ಸಾಲದು. ತಾವು ಮಾಡುತ್ತಿರುವುದು ದೇವರ ಸೇವೆ ಎಂದು ತಿಳಿದು ವೈಯಕ್ತಿಕ ಉದ್ದೇಶವನ್ನು ಇಟ್ಟುಕೊಳ್ಳದೆ, ಸರಿಯಾದ ಧೋರಣೆಯಲ್ಲಿ ಮಾಡಬೇಕು. ಮುಕ್ಕಾಲು ಭಾಗ ಮನಸ್ಸನ್ನು ದೇವರ ಮೇಲಿರಿಸಿ ಉಳಿದ ಕಾಲು ಭಾಗ ಮನಸ್ಸಿನಿಂದ ನೀವು ಮಾಡಬೇಕಾದುದನ್ನು ಮಾಡಿರಿ. ಈ ವಿಧಾನವನ್ನು ಅನುಸರಿಸಿದರೆ ನೀವು ಆದರ್ಶ ಕರ್ಮಯೋಗಿಯಾಗುವಿರಿ. ಶಾಂತಿ ಸಂತೋಷಗಳು ನಿಮ್ಮದಾಗುವುವು. ಬದಲಿಗೆ ಕೆಲಸದಲ್ಲಿಯೇ ಮುಳುಗಿದರೆ ಧ್ಯಾನ ಮಾಡದಿದ್ದರೆ ಅಹಂಕಾರ ಬೆಳೆದು ಜಗಳ ವಿರೋಧ ಮೊದಲಾದವು ನಿಮ್ಮ ಮನಸ್ಸನ್ನು ಆವರಿಸುವುದು. ಪ್ರತಿಯೊಂದು ಕೆಲಸದಲ್ಲಿಯೂ ದೇವರ ಸ್ಮರಣೆ ಇರಲಿ ಕೆಲಸವೇ ಉಪಾಸನೆ ಎಂಬುದನ್ನು ಮರೆಯಬೇಡಿ ಎಂದರು.

ಹೀಗೆ ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಪುತ್ರರಾದ ಸ್ವಾಮಿ ಬ್ರಹ್ಮಾನಂದರು ತಮ್ಮ ಗುರುಬೋಧನೆಯನ್ನು ಈ ಸಮಾಜಕ್ಕೆ ವಿವಿಧ ರೂಪದಲ್ಲಿ ತಿಳಿಸಿದರು. ಅದನ್ನು ಅನುಸರಿಸಿ ಪ್ರತ್ಯಕ್ಷದರ್ಶಿಗಳಾದರು. ಮಹಾಸಂಘದ ಅಧ್ಯಕ್ಷರಾಗಿ, ಮಾನಸ ಪುತ್ರರಾಗಿ, ಅವರು ಮಾಡಿದ ಕಾರ್ಯ ಅಪಾರವಾಗಿದೆ. ತಮ್ಮ ಆಧ್ಯಾತ್ಮಿಕ ಪುತ್ರನ ಬಗ್ಗೆ ರಾಮಕೃಷ್ಣರು ಭವಿಷ್ಯವಾಣಿಯನ್ನು ನುಡಿದಿದ್ದರು.

ಹಿಂದಿನ ಜನ್ಮದಲ್ಲಿ ಕೃಷ್ಣನ ಸ್ನೇಹಿತರಾಗಿದ್ದ ಬ್ರಹ್ಮಾನಂದರಿಗೆ ಈ ಸತ್ಯ ತಿಳಿದರೆ ಅವರ ಅಂತ್ಯವಾಗುವುದು ಎಂದು ನುಡಿದಿದ್ದರು. ಅದರಂತೆ 1922ರ ಏಪ್ರಿಲ್ 10ರಂದು ಸ್ವಾಮಿ ಬ್ರಹ್ಮಾನಂದರು ಇನ್ನಿಲ್ಲವಾದರು.

## ಪರಾಮರ್ಶನ ಗ್ರಂಥಗಳು


1. ಸ್ವಾಮಿ ಚೇತನಾನಂದ, **ದೇವರೊಡನೆ ಬಾಳಿದವರು ಭಾಗ–1,** 3ನೇ ಮುದ್ರಣ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, 2015
2. ಸ್ವಾಮಿ ಸೋಮನಾಥನಂದ, **ಶ್ರೀರಾಮಕೃಷ್ಣ ಶಿಷ್ಯವೃಂದ,** 7ನೇ ಮುದ್ರಣ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, 2015
3. ಕುವೆಂಪು, **ಶ್ರೀರಾಮಕೃಷ್ಣ ಪರಮಹಂಸ,** 12ನೇ ಮುದ್ರಣ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, 2009
4. ಬ್ರಹ್ಮಾನಂದ ವಚನಸುಧೆ, **ಅತ್ಯಮೂಲ್ಯ ಆಧ್ಯಾತ್ಮಿಕ ಸಲಹೆಗಳನ್ನೊಳಗೊಂಡ ಕೈಪಿಡಿ,** 8ನೇ ಮುದ್ರಣ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, 2016
5. ಸ್ವಾಮಿ ಯತೀಶ್ವರಾನಂದ, **ಧ್ಯಾನ ಜೀವನ ದೀಪಿಕೆ,** 7ನೇ ಮುದ್ರಣ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, 2018
6. ಸ್ವಾಮಿ ಯತೀಶ್ವರಾನಂದ, **ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ,** 6ನೇ ಮುದ್ರಣ, ಶ್ರೀರಾಮಕೃಷ್ಣ ಮಠ, ಬೆಂಗಳೂರು, 2014